"ಅರೇ... ನನ್ನಲ್ಲಿರುವಂತಹದೇ! ಆದರೆ, ನನ್ನದಲ್ಲ. ನನ್ನದು ಇಲ್ಲೇ ಇದೆ." ಆತ ಜೇಬಿನಿಂದ ಬಾಚಣಿಗೆ ತೆಗೆದು ತೋರಿಸಿದ.

"ಮತ್ತೆ ಇದು ಯಾರದ್ದು?" ಪೂವಯ್ಯ ಏರುದನಿಯಲ್ಲಿ ವಿಚಾರಿಸಿದ.

"ಅದು ನನಗೇನು ಗೊತ್ತು?" ವಿಶುವಿನದ್ದು ಉಡಾಫೆ ಉತ್ತರ.

"ನೀವೇನಾದರೂ ಇಲ್ಲಿಗೆ ಬಂದಿದ್ದೀರಾ?" ನನ್ನ ಪ್ರಶ್ನೆ.

"ಸೋದರ ಮಾವ ಅಂದ ಮೇಲೆ ಬರದೇ ಇರ್ತೇನೆಯೇ? ಆದರೆ, ಈ ಬಾಚಣಿಗೆ ನನ್ನದಲ್ಲ." ದನಿಯಲ್ಲಿ ಖಚಿತತೆಯಿತ್ತು.

"ಪೂವಯ್ಯನವರೇ, ವಿಶು ಸತ್ಯ ಹೇಳ್ತಿದ್ದಾರೆ ಅಂತ ಅನ್ನಿಸುತ್ತೆ. ಇದೊಂದು ಮಾಮೂಲು ಬಾಚಣಿಗೆ. ಯಾರಲ್ಲೂ ಇರಬಹುದು. ಕೆಲವು ವಿಷಯಗಳು ಹಾಗೆಯೇ. ಉದಾಹರಣೆಗೆ, ಜೆಲ್ ಪೆನ್ನು. ಎಲ್ಲರಲ್ಲೂ ಇರುತ್ತದೆ. ನನ್ನಲ್ಲೂ ಇದೆ. ನಿಮ್ಮಲ್ಲೂ ಇದೆಯಲ್ವೇ, ವಿಶು ಅವರೇ?"

ಆತ ಹೌದೆನ್ನುವಂತೆ ತಲೆ ಆಡಿಸಿದ.

"ನೋಡಿ, ಹಾಗೆಂದು ಬಾಚಣಿಗೆಯ ಬರಹ ಇವರದ್ದೇ ಅಂತ ಅನ್ನಲಾಗದು. ನಾವೀಗ ತನಿಖೆಯತ್ತ ಗಮನ ಹರಿಸೋಣ."

ಕರಮಚಂದನ ಹುಡುಕಾಟ ಮುಂದುವರೆಯಿತು. ನೆಲದ ಮೇಲಿದ್ದ ಕಪ್ಪು ಚರ್ಮದ ಚೀಲದ ಜಿಪ್ ತೆರೆದಿತ್ತು. ಅದರೊಳಗೆ ಪರಿಶೀಲಿಸಿದಾಗ ಸಿಕ್ಕಿದ್ದು ಅಂಕಪಟ್ಟಿಗಳು. ಎಲ್ಲವೂ ಮದುಮಗಳದ್ದು. ಪ್ರೌಢ ಶಾಲೆಯಿಂದ ಹಿಡಿದು ಪದವಿವರೆಗಿನದ್ದು.

"ಇವತ್ತು ಅವಳು ಗಂಡನ ಮನೆಗೆ ಹೋಗುವುದಲ್ವೇ? ನಾಡಿದ್ದು ಒಂದು ಕೆಲಸಕ್ಕೆ ಸಂದರ್ಶನಕ್ಕೆ ಹೋಗಬೇಕಂತೆ. ಅದಕ್ಕೇ ಇರಿಸಿಕೊಂಡಿದ್ದಾಳೆ." ಪೂವಯ್ಯ ಹೇಳಿದ.

ಅದರೊಳಗಿದ್ದ ಇನ್ನೊಂದು ವಸ್ತುವಂತೂ ತೀರಾ ವಿಚಿತ್ರವಾಗಿತ್ತು. ಅದೊಂದು ಬುರ್ಖಾ! ಮುಸ್ಲಿಂ ಮಹಿಳೆಯರು ಧರಿಸುವಂತಹದು!! ಗಾಢ ನೇರಳೆ ವರ್ಣದ್ದು. ನಮ್ಮ ಮೊಗದಲ್ಲಿ ಅಚ್ಚರಿ ಕಂಡ ಪೂವಯ್ಯ ಮುಖ ಕಿವಿಚಿ, ಹೇಳಿದ,

"ಇದು ರಾಖಿಯದ್ದಲ್ಲ! ಅವಳ ಫ್ರೆಂಡ್ ಸಾಯಿರಾಳದ್ದು. ನಮ್ಮ ಮನೆಗೆ ಬಂದಾಗ ಆಕೆ ಬಿಟ್ಟು ಹೋಗಿದ್ದಳಂತೆ. ಅವಳು ಮದುವೆಗೆ ಬರ್ತಾಳೆಂದು ಅವ್ಳಿಗೆ ಕೊಡಲಿಕ್ಕೆ ತಂದಿದ್ದು. ಸುಮ್ಮನೆ ತಲೆಹರಟೆ!!"

ಅಲ್ಲಿ ನಮಗೆ ಮತ್ತೇನೂ ಗಮನ ಸೆಳೆಯುವಂತಹದು ಗೋಚರಿಸಲಿಲ್ಲ. ಕಾರಿಡಾರಿನ ಅಂತ್ಯದಲ್ಲಿದ್ದ ಬಾಲ್ಕನಿಗೆ ಬಂದಾಗ ನಮಗೊಂದು ವಿಚಿತ್ರ ಸಂಗತಿ ಕಾಣಿಸಿತು. ಕಬ್ಬಿಣದ ಕಟಕಟೆಯ ಗೋಡೆಯ ಸನಿಹದ ಒಂದು ಸರಳಿಗೆ ಸುತ್ತಿ ಇಳಿ ಬಿದ್ದಿದ್ದ ಹುರಿಹಗ್ಗ! ಸಾಧಾರಣ ದಪ್ಪದ ಹಗ್ಗ. ಅದರ ಇನ್ನೊಂದು ಕೊನೆಯು ನೆಲದಿಂದ ಮೂರ್ನಾಲ್ಕು ಅಡಿಗಳಷ್ಟು ಮೇಲಿತ್ತು. ವ್ಯಕ್ತಿಯೊಬ್ಬ ಸುಲಭವಾಗಿ ಆ ಹಗ್ಗವನ್ನು ಬಳಸಿ, ಗೋಡೆಯ ಮೇಲೆ ಹೆಜ್ಜೆಯೂರಿ, ಬಾಲ್ಕನಿ ಪ್ರವೇಶಿಸಬಹುದಿತ್ತು!!

ಕರಮಚಂದ ಅದನ್ನು ಸಮಗ್ರವಾಗಿ ಪರಿಶೀಲಿಸಿ, ಉಸುರಿದ,

"ಇದರ ಅಂಚುಗಳು ಸವೆದಿಲ್ಲ. ಅಂದರೆ ಅರ್ಥವೇನು? ಇದನ್ನು ಇಲ್ಲಿರಿಸಿ ಬಹಳ ಸಮಯವಾಗಿಲ್ಲ!"

"ಆದರೆ, ಇದನ್ನು ಸುತ್ತಿದವನು ಬಾಲ್ಕನಿಯಲ್ಲೇ ನಿಂತಿರಬೇಕು. ಅರ್ಥಾತ್ ಆತ ಹಗ್ಗ ಹಿಡಿದು ಬಂದಿರುವುದು ಸಿಸಿಟೀವಿಯಲ್ಲಿ ದಾಖಲಾಗಿರಬೇಕು!" ನಾನು ಊಹನೆ ಮಂಡಿಸಿದೆ.

"ಅಗತ್ಯವಿಲ್ಲ. ಕೆಳಗಿನಿಂದ ನಿಂತು ವ್ಯಕ್ತಿಯೋರ್ವ ಹಗ್ಗ ಮೇಲೆ ಎಸೆಯಲೂಬಹುದು!" ಕರಮಚಂದನ ಪಡಿನುಡಿ.

ಅಲ್ಲಿಂದ ನಮ್ಮ ತನಿಖೆ ಸಿಸಿಟೀವಿಯ ವೀಕ್ಷಣೆಗೆ ವರ್ಗಾವಣೆಯಾಯಿತು. ಕ್ಷಿಪ್ರ ವೀಕ್ಷಣೆಯಲ್ಲಿ ಸುಳಿವು ನೀಡುವಂತಹದೇನೂ ಗೋಚರಿಸಲಿಲ್ಲ. ವಿಶು ಕೊನೆಯದಾಗಿ ಮಹಡಿ ಏರಿದ್ದು ನೆಕ್ಲೇಸ್ ನಾಪತ್ತೆಯಾಗಿದ್ದು ಗೊತ್ತಾಗುವ ಹದಿನೈದು ನಿಮಿಷಗಳ ಮೊದಲು. ಮಹಡಿ ಏರಿದವರಲ್ಲಿ ಅಪರಿಚಿತರಾರೂ ಇರಲಿಲ್ಲವೆಂದು ಸಾಬು ಪೂವಯ್ಯ ದೃಢಪಡಿಸಿದ.

ಸಿಸಿಟೀವಿ ಅಳವಡಿಸಿದ ಕೊಠಡಿಯಿಂದ ಹೊರ ಬರುವಾಗ, ಮದುವೆ ಮಂಟಪದಲ್ಲಿ ಚಟುವಟಿಕೆ ಮಂದವಾಗಿತ್ತು. ಅಲ್ಲಿ ಮದುಮಗಳೊಂದಿಗೆ ಹರಟೆಯಲ್ಲಿದ್ದ ನೇರಳೆ ಬಣ್ಣದ ಬುರ್ಖಾ ಧರಿಸಿದ್ದ